Dec-12
T-82

Regd No BG 155 14-11-1969

SATYAVADI Daily, MYSORE 4 ★ 53 rd Year of Publication

ಶ್ರೀ ಸತ್ಯನಾರಾಯಣ
ಬೆನಿಫಿಟ್ ಸ್ಕೀಂ
(ಚಾಮುಂಡೇಶ್ವರಿ ಟಾಕೀಸ್ ಕಟ್ಟಡ)
203, ಸಯ್ಯಾಜಿರಾವ್ ರಸ್ತೆ,
ಮೈಸೂರು-1
ಮೇಲ್ಕಂಡ ಯೋಜನೆಗೆ
ಇಂದೇ ಚಂದಾದಾರರಾಗಿರಿ
ಅದರ ಫಲವನ್ನು ಪಡೆಯಿರಿ

ಸತ್ಯವಾದಿ

Golden
Jubilee
Celebrated
Paper

ಸ್ಥಾಪಕರು: ಆರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಇಂದಿರಾ ಗಾಂಧಿ ಸರ್ಕಾರದ ಮೇಲೆ ಖಂಡನಾ ನಿರ್ಣಯ

ಕೆನ್ನೆಗೆ ಏಟು

ನವದೆಹಲಿ— ಪಾರ್ಲಿಮೆಂಟು ಭವನದಲ್ಲಿ ಪಾಲಿಮೆಂಟರಿ ವಿಾಟಿಂಗು ನಡೆಯುತ್ತಿದ್ದಾಗ ಹೊರಗೆ ಇಂದಿರಾರವರ ಪರ 2 ಸಾವಿರ ಜನರ ಗುಂಪು ಪ್ರದರ್ಶನ ನಡೆಸಲಾಗುತ್ತಿತ್ತು – ಆಗ ಅಲ್ಲಿಗೆ ಬಂದ ಪಿಂಡಿಕೇಟ್ ಪರದ ಶ್ರೀಮತಿ ತಾರಕೇಶ್ವರಿ ಸಿನ್ಹ ಬಂದು, ಮಾತಿಗೆಮಾತು ಬೆಳೆದು, ಇವರ ಕೆನ್ನೆಗೆ ಒಬ್ಬ ಹೊಡೆದನೆಂದು ಆಪಾದಿಸಲಾಗಿದೆ – ಇನ್ನೇ ಒಬ್ಬನಿಗೆ ಕೆನ್ನೆಗೆ ಹೊಡೆಯದಾಗಿಯೂ ಹೇಳಲಾಗಿದೆ.

ಸ್ಟಾನಕ್ ಭವನ

ನವದೆಹಲಿ— ವಿದ್ಯಾರ್ಥಿಗಳ ಚಟುವಟಿಕೆಗಾಗಿ ದೇಶದಲ್ಲಿ ಏಳು ಸ್ಟಾನಕ್ ಭವನ ನಿರ್ಮಿಸಲು ಭಾರತ ವಿದ್ಯಾ ಸಚಿವಾಲಯ ನಿರ್ಧರಿಸಿದೆ – ಸ್ಟಾನಕ್‌ರವರ 5 ನೇ ಶತ ಮಾನೋತ್ಸವ ಸಂದರ್ಭದಲ್ಲಿ ಸರಕಾರ ರೂ 50 ಲಕ್ಷ ಖರ್ಚುಮಾಡಲಿದೆ – ವಿವಿಧ ವಿಶ್ವವಿದ್ಯಾಲಯಗಳಲ್ಲಿ ಸ್ಟಾನಕ್ ಜ್ಞಾನ ಪೀಠಗಳು ಸ್ಥಾಪಿಸಲಾಗುವುದು.

●

ಖಂಡನೆ

ನವದೆಹಲಿ— ಕಾಂಗ್ರೆಸ್ಸಿನಲ್ಲಿನ ಇಂದಿರಾರವರ ವಿರೋಧಿಗಳೂ ಹಲವು ವಿರೋಧ ಗುಂಪುಗಳವರೂ ಇಂದಿರಾರ ಸರಕಾರದ ವಿರುದ್ಧ ಪಾರ್ಲಿಮೆಂಟಿನಲ್ಲಿ ಖಂಡನಾ ನಿರ್ಣಯ ತರಲಿದ್ದಾರೆ.

★

ರಾಷ್ಟ್ರಾಧ್ಯಕ್ಷರನ್ನು ಸಂದರ್ಶಿಸಿದರು

ನವದೆಹಲಿ— ಕಾಂಗ್ರೆಸ್ಸು ಪಾರ್ಲಿಮೆಂಟರಿ ಪಾರ್ಟಿಯು ಪ್ರಧಾನಿ ಇಂದಿರಾರವರ ಬಗ್ಗೆ ವಿಶ್ವಾಸ ಸೂಚಿಸಿದ ನಂತರ ಸಭೆಯನ್ನು ಮತ್ತೆ ತಾ|| 16 ನಡೆಸಲು ನಿರ್ಧರಿಸಲಾಯಿತು – ಪ್ರಧಾನಿಯವರು ರಾಷ್ಟ್ರಾಧ್ಯಕ್ಷ ಗಿರಿಯವರನ್ನು ಕಂಡು, ಕಾಂಗ್ರೆಸ್ ಪಾರ್ಟಿ ವಿಷಯ, ವಿಾಟಿಂಗಿನಲ್ಲಿ ಆದ ನಿರ್ಧಾರವನ್ನು ತಿಳಿಸಿದರು.

○

ಇಂದಿರಾರ ಪರ

ನವದೆಹಲಿ— ತ್ರಿವರ್ಣ ಧ್ವಜ ಹಾರಾಡಿಸುತ್ತಾ, ಇಂದಿರಾರವರ ಪರ ಘೋಷಣೆ ಕೂಗುತ್ತಾ 2000 ಜನ ಪಾರ್ಲಿಮೆಂಟು ಭವನದ ಮುಂದೆ ಪ್ರದರ್ಶನ ನಡೆಸಿದರು : ಸೈಕಲ್, ರಿಕ್ಷಾ, ಟ್ರಕ್, ಟಿಂಪೋಸ್‌ನಲ್ಲಿ ಬಂದಿದ್ದರು.

○

ಕೈಗಾಡಿಗಳ ಮುಷ್ಕರ

ಮೈಸೂರು— ಸಂತೇಪೇಟೆಯಲ್ಲಿ ಕೈಗಾಡಿಗಳವರು ಮುಷ್ಕರ ಹೂಡಿ ತಮ್ಮ ಖಾಲಿ ಗಾಡಿಗಳನ್ನೆಲ್ಲಾ ಒಂದು ಕಡೆ ಅಡ್ಡಲಾಗಿ ನಿಲ್ಲಿಸಿದ್ದಾರೆ.

ಆಮದು ಸಾರಾಯಿ ವಶ

ಬೆಂಗಳೂರು— ಹೆರೇಹಳ್ಳಿ ಹತ್ತಿರ ಒಂದು ಅಂಬಾಸಿಡರ್ ಕಾರನ್ನು ಅಟ್ಟಿಕೊಂಡು ಹೋಗಿ, ಸಿ ಐ ಡಿ ಸ್ವೆಷಲ್ ಪಡೆಯವರು ಅದರಲ್ಲಿದ್ದ ರೂ 15000 ಬೆಲೆ ಆಮದು ಸಾರಾಯಿ ವಶಪಡಿಸಿಕೊಂಡರು.

●

ಗ್ರಾಮ ಕರ್ಣೀಕರು

ಬೆಂಗಳೂರು— ಸರಕಾರವು 8000 ಗ್ರಾಮ ಕರ್ಣೀಕರನ್ನು ನೇಮಿಸಲು ನಿರ್ಧರಿಸಿದೆ – ಇದಕ್ಕೆ ವರ್ಷಕ್ಕೆ ರೂ 1 ಕೋಟಿ ಖರ್ಚು.

ಲೇವಾದೇವಿ ಹುಸ್ಕೂರು

ಬಾಗಲಕೋಟೆ— ಒಬ್ಬ ಉಪಾಧ್ಯಾಯನ ಮನೆಯನ್ನು ಪೋಲೀಸರು ಶೋಧಿಸಿ, ರೂ 50000 ಮೌಲ್ಯದ ಚಿನ್ನ ಬೆಳ್ಳಿ ಆಭರಣ, ಹಣ, ಪ್ರಾಂಸರಿ ನೋಟುಗಳನ್ನು ವಶಪಡಿಸಿಕೊಂಡರು – ಈತನು ಲೈಸೆನ್ಸಿಲ್ಲದೆ ಲೇವಾದೇವಿ ನಡೆಸುತ್ತಿದ್ದನೆಂದು ಆಪಾದಿಸಲಾಗಿದೆ.

ಮೈಸೂರು ದಸರಾ ವಸ್ತು ಪ್ರದರ್ಶನ 1969

ಸ್ಟಾಲ್ ಹೊಂದಿರುವವರಿಂದಲೂ ಮತ್ತು ಸಾರ್ವಜನಿಕರಿಂದಲೂ ಬಂದ ಕೋರಿಕೆಯ ಪ್ರಕಾರ ಮೈಸೂರು ದಸರಾ ವಸ್ತು ಪ್ರದರ್ಶನವನ್ನು 16-11-69ರಿಂದ 23-11-69ರ ವರೆಗೆ (ಎರಡು ದಿನಗಳೂ ಸೇರಿ) ಒಂದು ವಾರ ವಿಸ್ತರಿಸಲಾಗಿದೆ. ಚಿತ್ರ ಕಲಾ ವಿದರುಗಳಿಂದ ನೃತ್ಯ, ನಾಟಕ ಮತ್ತು ಸಂಗೀತ ಇತ್ಯಾದಿ ಆಯ್ಕೆಯಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದೆ ಈ ಅವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು ಕೋರಿದೆ.

ಸಹಿ/- ಟಿ. ವಿ ಅಪ್ಪೇಗೌಡ
ಕಾರ್ಯದರ್ಶಿ
ದಸರಾ ವಸ್ತುಪ್ರದರ್ಶನ ಸಮಿತಿ ಮೈಸೂರು.
ಡಿ. ಐ. ಟಿ. 2028/69

ನಾನಕ್ ಭವನ

ನವದೆಹಲಿ— ವಿದ್ಯಾರ್ಥಿಗಳ ಚಟುವಟಿಕೆಗಾಗಿ ದೇಶದಲ್ಲಿ ಏಳು ನಾನಕ್ ಭವನ ನಿರ್ಮಿಸಲು ಭಾರತ ವಿದ್ಯಾ ಸಚಿವಾಲಯ ನಿರ್ಧರಿಸಿದೆ – ನಾನಕ್‌ರವರ 5 ನೇ ಶತ ಮಾನೋತ್ಸವ ಸಂದರ್ಭದಲ್ಲಿ ಸರಕಾರ ರೂ 50 ಲಕ್ಷ ಖರ್ಚುಮಾಡಲಿದೆ – ವಿವಿಧ ವಿಶ್ವವಿದ್ಯಾಲಯಗಳಲ್ಲಿ ನಾನಕ್ ಜ್ಞಾನ ಪೀಠಗಳು ಸ್ಥಾಪಿಸಲಾಗುವುದು.

●

ಕಾಂಗ್ರೆಸ್ ಅಧ್ಯಕ್ಷರ ಕಡೆ

ನವದೆಹಲಿ— ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿಗೆ ಹೊಸ ನಾಯಕರನ್ನು ಭಾನುವಾರ ಆಯ್ಕೆ ಮಾಡಲಾಗುವುದು – ಅಲ್ಲಿಗೂ ಯಂಗ್ ಟರ್ಕ್‌ಗಳು ಹೋಗಿ ಇಂದಿರಾರವರ ನಾಯಕತ್ವಕ್ಕೇ ಹೆಚ್ಚು ಮತ ಪಡೆಯಲೂ, ಬೇರೆ ನಾಯಕರ ಆಯ್ಕೆಗೆ ಅವಕಾಶ ಕೊಡದಿರಲು ಸನ್ನಾಹ ಮಾಡುತ್ತಿದ್ದಾರೆ.

●

ಗಾಂಧೀ ನಾಟಕ

ನವದೆಹಲಿ— ಗಾಂಧೀಜೀ ಜೀವಿತ ಬಗ್ಗೆ ಅಂತರ ರಾಷ್ಟ್ರೀಯ ನಾಟಕ ಬರೆಯುವ ಸ್ಪರ್ಧೆಯ ಪ್ರಥಮ ಬಹುಮಾನವು ಬೆಂಗಳೂರಿನ ಭಾಸ್ಕರರಾವ್‌ರಿಗೂ, ಹವ್ಯಾಸಿ ಡಾ|| ಜಾರ್ಜ್ ಹರ್ಬ್ಸ್‌ದರಿಗೂ ತಲಾ ರೂ. 33750 ದೊರೆಯಿತು.

ದಸರಾ ವಸ್ತುಪ್ರದರ್ಶನದಲ್ಲಿ
ವಿಶೇಷ ಮನರಂಜನೆ ಕಾರ್ಯಕ್ರಮ
ತಾ|| 15-11-1969 ಶನಿವಾರ
ಸಂಜೆ 7 ಘಂಟೆಗೆ
ಮದ್ರಾಸಿನ ಪ್ರಸಿದ್ಧ ಸಿನಿಮಾ ನಟ ಶ್ರೀಟಿ. ಆರ್. ನರಸಿಂಹರಾಜು
ಅವರ ತಂಡದವರಿಂದ
'ಸಾಹುಕಾರ'
ಎಂಬ ನಾಟಕ.
ಪ್ರವೇಶ ದರ 50. ಪೈಸೆ.

ನೀವು ಲಕ್ಷಾಧೀಶ್ವರರಾದರೂ ಆಗಬಹುದು
ಮೈಸೂರು ರಾಜ್ಯದ ಲಾಟರಿ
2,50,000 ರೂ. ಗಳ 4 ಮೊದಲನೆ ಬಹುಮಾನಗಳು
1,00,000 ರೂ. ಗಳ 4 ಎರಡನೆ ಬಹುಮಾನಗಳು
ಇವುಗಳಲ್ಲದೆ ಜೊತೆಗೆ 4,268 ಇತರ 100 ರೂ. ಇಂದ 50,000 ರೂ. ವರೆಗಿನ ನಗದು ಬಹುಮಾನಗಳು
ಒಂದು ಟಿಕೆಟ್ಟಿನ ಬೆಲೆ 1-00 ರೂ. ಮಾತ್ರ
ಲಾಟರಿ "ಡ್ರಾ" ಮಾಡುವ ತಾರೀಖು, 25 ನೇ ಜನವರಿ 1970, ಭಾನುವಾರ
ಅಧಿಕೃತ ಮಾರಾಟಗಾರರು :
ಬಾಹುಸಾರ್ ಕಂಪೆನಿ, ಓಲ್ಡ್ ಬ್ಯಾಂಕ್ ರೋಡ್, ಮೈಸೂರು

ವಿಶ್ವಾಸ

ನವದೆಹಲಿ— ಪ್ರಧಾನಿಯವರು ನಿನ್ನೆ ಕರೆದಿದ್ದ ಕಾಂಗ್ರೆಸ್ ಪಾರ್ಲಿಮೆಂಟರಿ ಪಾರ್ಟಿಯು ಪ್ರಧಾನಿ ಇಂದಿರಾರವರ ನಾಯಕತ್ವದಲ್ಲಿ ವಿಶ್ವಾಸ ವ್ಯಕ್ತಪಡಿಸಿತು.

ಹೆಸರು ಬದಲಾವಣೆ

ಬೆಂಗಳೂರು— ಆಸ್ಪತ್ರೆ ಕಾಂಪೌಂಡರರನ್ನು ಫಾರ್ಮಸಿಸ್ಟ್‌ಎಂದು ಕರೆಯಲು ಸರ್ಕಾರದ ಆಜ್ಞೆಯಾಗಿದೆ.

ಮೈಸೂರು ದಸರಾ ವಸ್ತು ಪ್ರದರ್ಶನ 1969
15-11-1969 ರಿಂದ 23-11-1969 ರವರೆಗೆ
ಪ್ರತಿದಿನದ ಸಾಂಸ್ಕೃತಿಕ ಕಾರ್ಯಕ್ರಮಗಳು

15—11—1969
ಶನಿವಾರ, ವಿಶೇಷ ಕಾರ್ಯಕ್ರಮ

ಸಂಜೆ 5–30 ರಿಂದ ಸಂಜೆ 7 ಶ್ರೀ ತ್ಯಾಗರಾಜನ್ ಮತ್ತು ತಾರಾನಾಥನ್ ಮೈಸೂರು. **ಸಂಗೀತ**

ಸಂಜೆ 7 ಶ್ರೀ ಟಿ. ಆರ್. ನರಸಿಂಹರಾಜು, (ಚಿತ್ರಕಲಾವಿದ ಮದರಾಸು) **ನಾಟಕ** [ಸಾಹುಕಾರ]

16—11—69
ಭಾನುವಾರ, ವಿಶೇಷ ಕಾರ್ಯಕ್ರಮ

ಸಂಜೆ 5–30 ರಿಂದ 7 ಘಂಟೆ, ಬೆಳ್ಳೂರು ಸಹೋದರಿಯರು **ಸಂಗೀತ**

ಸಂಜೆ 7 ಶ್ರೀ ಟಿ. ಆರ್. ನರಸಿಂಹರಾಜು [ಚಿತ್ರಕಲಾವಿದ] ಮದರಾಸ್ **ನಾಟಕ** [ಸದಾರಾಮೆ]

17-11-69 ಸೋಮವಾರ

ಸಂಜೆ 6 ರಿಂದ 7 ಕುಮಾರಿ ವಿ.ಎಸ್. ಇಂದ್ರಮ್ಮ, ಮೈಸೂರು. **ಸಂಗೀತ**

ಸಂಜೆ 7 ರಿಂದ 9–30 ಮಲ್ಲೇಶ್ವರಂ ಆರ್ಟಿಸ್ಟ್ಸ್ ಬೆಂಗಳೂರು **ನಾಟಕ** [ಶನಿಯ,ಕ್ಕೊಂದು ಸುಳ್ಳು]

18-11-69
ಮಂಗಳವಾರ, ವಿಶೇಷ ಕಾರ್ಯಕ್ರಮ

ಸಂಜೆ 5–30 ರಿಂದ 7. ಶ್ರೀ ಎನ್. ನರಸಿಂಹನ್, ಶ್ರೀರಂಗಪಟ್ಟಣ, **ಗೋಟುವಾದ್ಯ**

ಸಂಜೆ 7 **ಕುಮಾರಿ ಚಂದ್ರಕಲಾ** [ಚಿತ್ರತಾರೆ] ಮದ್ರಾಸ್ **ನೃತ್ಯ**

19-11-69 ಬುಧವಾರ

ಮಧ್ಯಾಹ್ನ 4 ರಿಂದ ಸಂಜೆ 6–30 ಶ್ರೀ ಜಲಿಬೆಂಚಿ ದೊಡ್ಡ ಬಸವರಾಯಗವಾಯ್ ಬಳ್ಳಾರಿ. **ಸಂಗೀತ**

ಸಂಜೆ 6-30 ರಿಂದ ರಾತ್ರಿ 8 3 ಶ್ರೀ ಸಿ.ಎಂ. ಮಧುರಾನಾಥ್ ಬೆಂಗಳೂರು. **ಕೊಳಲು**

ರಾತ್ರಿ 8 30 ರಾತ್ರಿ 10 ಮಾಸ್ಟರ್ ವಿಟ್ಟಲ್ ಮತ್ತು ತಂಡದವರಿಂದ, ಮಂಗಳೂರು. **ನೃತ್ಯ**

20—11—69 ಗುರುವಾರ

ಸಂಜೆ 6 ರಿಂದ 7 ಶ್ರೀಮತಿ ಡಿ ಆರ್. ನಂದಿನಿ, ಮೈಸೂರು. **ಸಂಗೀತ**

ಸಂಜೆ 7 ರಿಂದ 9-30 ಮೈಸೂರು ರಾಜ್ಯ ವಿದ್ಯುತ್ ಮಂಡಲಿ, ನೌಕರರ ಸಂಘ, ಬೆಂಗಳೂರು. **ನಾಟಕ** [ಡನ್‌ಲಪ್ ಗರ್ಲ್ಸ್]

21—11—69 ಶುಕ್ರವಾರ

ಸಂಜೆ 5 ರಿಂದ 7-30 ಶ್ರೀ ಅನೂರು ಸೂರ್ಯನಾರಾಯಣ ಬೆಂಗಳೂರು. **ಸಂಗೀತ**

ಸಂಜೆ 7-30 ರಿಂದ ರಾತ್ರಿ 10 ಕರ್ನಾಟಕ ಕಲಾಸಂಘ, ಮೈಸೂರು. **ನಾಟಕ** [ಪ್ರತೀಕಾರ]

22—11—69
ಶನಿವಾರ, ವಿಶೇಷ ಕಾರ್ಯಕ್ರಮ

ಸಂಜೆ 6 ರಿಂದ 7 ರವರೆಗೆ ಭಾರತೀಯ ಸ್ತ್ರೀ ಸಮಾಜ, ಮೈಸೂರು. **ಸಂಗೀತ**

ಸಂಜೆ 7 **ವೆಂಕಟರಾಮು ನಾಟ್ಯ ಮಂಡಲಿ** ಕುಚಿಪುಡಿ, (ಆಂಧ್ರ ಪ್ರದೇಶ) **ನೃತ್ಯ** [ಭಾವಾಕಲ್ಪ]

23—11—69
ಭಾನುವಾರ, ವಿಶೇಷ ಕಾರ್ಯಕ್ರಮ

ಸಂಜೆ 4 ರಿಂದ 6 ಶ್ರೀ ಎಂ ವಿ. ನಾಗೇಂದ್ರಪ್ಪ ಮತ್ತು ತಂಡದವರಿಂದ, ಬೆಂಗಳೂರು. **ವಾದ್ಯಗೋಷ್ಠಿ**

ಸಂಜೆ 6 ರಿಂದ 7-30 ಶ್ರೀ **ಚಿಂತನಪಲ್ಲಿ ರಾಮಚಂದ್ರರಾವ್**, ಬೆಂಗಳೂರು. **ಸಂಗೀತ**

ಸಂಜೆ7-30 ಶ್ರೀಮತಿ ಎಂ. ಎನ್ ಲಕ್ಷ್ಮೀದೇವಿ ಮತ್ತು ತಂಡದವರಿಂದ **ನಾಟಕ** (ಚಿತ್ರ ಕಲಾವಿದೆ) ಮದ್ರಾಸ್ [ಆರಾಧನ]

ಸಹಿ/ ಟಿ ವಿ. ಅಪ್ಪೇಗೌಡ,
ಕಾರ್ಯದರ್ಶಿ.

ವುಡ್‌ಲಾಂಡ್ ತಾ.14—11—69 ರಿಂದ
ಶಿ ಸ ಅಮೋಘ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —

ಹ ಮ್ ಸಾ ಯ

ಪಾತ್ರ : ಮಾಲಾಸಿನ್ಹಾ, ಜಾಯ್ ಮುಖರ್ಜಿ, ಶರ್ಮಿಳಾ ಟಾಗೂರ್
ಸಂಗೀತ : ಓ. ಪಿ. ನಯ್ಯಾರ್

[ದಿನ 3 ಪ್ರದರ್ಶನಗಳು]

ಅಪೆರಾ 14—11—69 ರಿಂದ
.... ಅಶ್ಯನೋಘ ತಮಿಳು ಚಿತ್ರ ....

ವೇಟ್ಟೈಕಾರನ್

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣಕ್ಕೆ ಬೆಂಬಲ ನೀಡಿ

Protect the Cow

Quality Printing — Neat Binding
Lakshminarasimha Press
Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapura, Mysore